# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ದಕ್ಷಿಣ ವಲಯ ಪಟ್ಟಾಭಿರಾಮನಗರ,

ದಿನಾಂಕ: 18.06.2022 ರಂದು ವಾರ್ಡ್– 168 ಪಟ್ಟಾಭಿರಾಮನಗರ ವಾರ್ಡ್‌ನಲ್ಲಿ ನಡೆದ ಸಮಿತಿ ಸಭೆಯ ನಡವಳಿಗಳು :–

ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಮತ್ತು ವಾರ್ಡ್ 168 ಸಾರ್ವಜನಿಕರು

| ಕ್ರಮ ಸಂಖ್ಯೆ | ಹೆಸರು | ಹುದ್ದೆ |
|---|---|---|
| 01 | ಶ್ರೀ ಜಗದೀಶ್.ಕೆ ನಾಯಕ | ಜಂಟಿ ಅಯುಕ್ತರು (ದಕ್ಷಿಣ) ಹಾಗೂ ಅಧ್ಯಕ್ಷರು ವಾರ್ಡ್–168ರ ಸಮಿತಿ |
| 02 | ಶ್ರೀ ಚಂದ್ರಶೇಖರ್. ವಿ | ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್–168 |
| 03 | ಡಾ. ಹಲೀಮ್‌ಸಾರ | MO–168 |
| 04 | ಶ್ರೀ ರಾಮಚಂದ್ರ.ಸಿ | ಹಿರಿಯ ಆರೋಗ್ಯ–168 ನಿರೀಕ್ಷಕರು, ಬಿ.ಬಿ.ಎಂ.ಪಿ |
| 05 | ಶ್ರೀ ನಾಗರಾಜು .ಎಸ್ | ಕಂದಾಯ ಇಲಾಖೆ, ಬಿ.ಬಿ.ಎಂ.ಪಿ ಜಯನಗರ |
| 06 | ಶ್ರೀ ರವಿ ಆರ್. | ಜಯನಗರ |
| 07 | ಶ್ರೀ ಗೌತಮ್.ವೈ | ಕಿರಿಯ ಆರೋಗ್ಯ–168 ನಿರೀಕ್ಷಕರು, ಬಿ.ಬಿ.ಎಂ.ಪಿ |
| 08 | ಶ್ರೀ ನರೇಂದ್ರ ಬಾಬು | ಅರಣ್ಯ ಇಲಾಖೆ (ದಕ್ಷಿಣ) , ಬಿ.ಬಿ.ಎಂ.ಪಿ |
| 09 | ಶ್ರೀ ರಂಜೀತ್ ಕುಮಾರ್ | Supervisor, w-168 , SWM |
| 10 | ಶ್ರೀ ಗಂಗಾಧರ್ | W.I, BWSSB, ಜಯನಗರ |
| 11 | ಶ್ರೀ ಸಜ್ಜಪ್ಪ .ಬಿ | ಕಂದಾಯ ಇಲಾಖೆ, ಬಿ.ಬಿ.ಎಂ.ಪಿ ಜಯನಗರ |
| 12 | ಶ್ರೀ ಸಚ್ಚಿನ್ ಕೆ.ಪಿ. | ಮಾರ್ಷಲ್–168 , ಬಿ.ಬಿ.ಎಂ.ಪಿ |
| 13 | ಶ್ರೀ.ಮಧುಸೂದನ್ ಬಿ.ಎನ್. | ರಸ್ತೆ ಮೂಲಭೂತ ಸೌಕರ್ಯ ವಿಭಾಗ(ದಕ್ಷಿಣ) |
| 14 | ಶ್ರೀ ಬಸಪ್ಪ | R.I ವಾರ್ಡ್–168 ಬಿ.ಬಿ.ಎಂ.ಪಿ |
| 15 | ಶ್ರೀ ಗಿರೀಶ್ | T.I ವಾರ್ಡ್–168 ಬಿ.ಬಿ.ಎಂ.ಪಿ |
| 16 | ಶ್ರೀ ಉಮೇಶ್ | ಸ.ಕಾ.ನಿ.ಅ, ವಿದ್ಯುತ್, ಬಿ.ಬಿ.ಎಂ.ಪಿ ಜಯನಗರ |
| 17 | ಶ್ರೀಮತಿ.ನಾಗರತ್ನ | ಲಿಂಕ್ ವರ್ಕರ್ಸ್ |
| 18 | ಶ್ರೀ.ಪ್ರಕಾಶ್ ಕೆ | ಕಿರಿಯ ಅಭಿಯಂತರರು ಬೆಸ್ಕಾಂ ಜಯನಗರ |
| 19 | ಶ್ರೀ.ಅಂಥೋನಿರಾಜ್ ಆರ್ | ಪಿ.ಎಸ್.ಐ., ಮೈಕೋ ಸಂಚಾರ ಪೊಲೀಸ್ ಠಾಣೆ |
| 18 | ವಾರ್ಡ್ 168ರ ಸ್ಥಳಿಯ ನಿವಾಸಿಗಳ ಸಂಘ ಮತ್ತು ನಾಗರೀಕರು | |

ಅಧ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸಾರ್ವಜನಿಕರಿಗೆ ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರುತ್ತಾ, ಸಭೆಯನ್ನು ಪ್ರಾರಂಭಿಸುತ್ತಾ, ದಿನಾಂಕ 04.06.2022 ರಂದು ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಹಾಗೂ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಮಾಹಿತಿ ಪಡೆದುಕೊಳ್ಳಲಾಯಿತು.

1. ಜಯನಗರ 4ನೇ 'ಟಿ' ಬ್ಲಾಕ್‌ನ 36ನೇ (ಆರ್.ವಿ ಕಾಲೇಜುರಸ್ತೆ) ಅಡ್ಡರಸ್ತೆಯಲ್ಲಿರುವ ಮನೆಗೆ ಒಳಚರಂಡಿ ಸಂಪರ್ಕ ಕಲ್ಪಿಸುವ ಪೈಪ್ ಹಾಳಾಗಿದ್ದು ಹಾಗೂ ತುಂಬಾ ಹಳೆಯದಾಗಿರುತ್ತದೆ. ಇಲ್ಲಿನ ಅನೇಕ ಮನೆಗಳಿಗೆ ಒಳಚರಂಡಿ ಪೈಪ್ ಅಳವಡಿಸಲು ರಸ್ತೆ ಅಗೆಯಲು ಅನುಮತಿ ನೀಡಲು ಕ್ರಮಕೈಗೊಳ್ಳಲು ಸೂಚಿಸಲಾಯಿತು.
   (ಕ್ರಮ:– ಸ.ಕಾ.ನಿ.ಅ, ಜಯನಗರ ಉಪ ವಿಭಾಗ ಬಿ.ಬಿ.ಎಂ.ಪಿ & ಸ.ಕಾ.ನಿ.ಅ, ಜಯನಗರ ಉಪ–ವಿಭಾಗ BWSSB)

2. ಜಯನಗರ 4ನೇ ಬ್ಲಾಕ್‌ನ 36ನೇ ಅಡ್ಡರಸ್ತೆಯಲ್ಲಿ ರಾತ್ರಿ ವೇಳೆಯಲ್ಲಿ ರಸ್ತೆ ಬದಿ ಹೋಟೆಲ್ ಇಟ್ಟುಕೊಂಡು ವ್ಯಾಪಾರ ಮಾಡುತ್ತಿರುವುದರಿಂದ ಅಲ್ಲಿನ ನಿವಾಸಿಗಳಿಗೆ ಮತ್ತು ಪಾದಚಾರಿಗಳಿಗೆ ತೊಂದರೆಯಾಗುತ್ತಿದ್ದು. ಕೂಡಲೆ ಈ ಬಗ್ಗೆ ಕ್ರಮವಹಿಸಲು ಸೂಚಿಸಲಾಯಿತು. (ಕ್ರಮ:– ಆರೋಗ್ಯಧಿಕಾರಿಗಳು, ಬಿ.ಬಿ.ಎಂ.ಪಿ, ಜಯನಗರ)

3. ಜಯನಗರ 4ನೇ 'ಟಿ' ಬ್ಲಾಕ್‌ನ 36ನೇ (ಆರ್.ವಿ ಕಾಲೇಜು ರಸ್ತೆ) ಅಡ್ಡರಸ್ತೆಯಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು. ಇದರಿಂದ ಸ್ಥಳಿಯ ನಿವಾಸಿಗಳಿಗೆ ಭಯದ ವಾತಾವರಣ ಸೃಷ್ಟಿಯಾಗಿದ್ದು, ಕೂಡಲೇ ಕ್ರಮವಹಿಸಲು ತಿಳಿಸಲಾಯಿತು. (ಕ್ರಮ:– ಸಹಾಯಕ ನಿರ್ದೇಶಕರು(ಪಶುಸಂಗೋಪನೆ)

4. ವಾರ್ಡ ಸಂಖ್ಯೆ 168 ರಲ್ಲಿ ಅನೇಕ ಮನೆಗಳ ಛಾವಣೆ (Terrace) ಗಳಿಂದ ಬರುವ ಮಳೆನೀರು ಪೈಪ್ ಅನ್ನು ನೇರವಾಗಿ ಮ್ಯಾನ್‌ಹೋಲ್ (Manhole) ಗಳಿಗೆ ಜೋಡಿಸಿದ್ದು. ಇದರಿಂದ ಮ್ಯಾನ್‌ಹೋಲ್‌ಗಳಲ್ಲಿ ನೀರಿನ ಹರಿವು ಹೆಚ್ಚಾಗಿ ರಸ್ತೆ ಮೇಲೆ ಹುಕ್ಕಿ ಹರಿದು (Excess of flow) ಸಾರ್ವಜನಿಕ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿದ್ದು. ಇದರ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು. (ಕ್ರಮ:– ಸ.ಕಾ.ನಿ.ಅ, BWSSB, ಜಯನಗರ)

5. ಜಯನಗರ ಮೆಟ್ರೋ ನಿಲ್ದಾಣದ ಹತ್ತಿರ ಆಟೋ ನಿಲ್ದಾಣವಿದ್ದು, ಅಲ್ಲಿನ ಆಟೋ ಮಾಲೀಕರು ಟ್ರಾಫಿಕ್ ನಿಮಯವಳಿಗಳನ್ನು ಪಾಲಿಸದೆ, ಮೆಟ್ರೋ ಸಂಚಾರಿಗಳಿಂದ ಬಾಡಿಗಿಗೆ ಹೆಚ್ಚಿನ ಹಣ ಪಡೆಯುತ್ತಾರೆ ಹಾಗೂ ಸಾರ್ವಜನಿಕರೊಂದಿಗೆ ಅಸಭ್ಯ ವರ್ತನೆಯಿಂದ ನಡೆದುಕೊಳ್ಳುತ್ತಿದ್ದು ಮತ್ತು ಇಲ್ಲಿ ಉದ್ಯಾನವನವಿದ್ದು ರಾತ್ರಿ ವೇಳೆಯಲ್ಲಿ ಕೆಲವು ಅನಾಮದೇಯ ವ್ಯಕ್ತಿಗಳಿಂದ ಕಾನೂನು ಬಾಹಿರ ಚಟುವಟಿಕೆ ಹಾಗೂ ಅಸಭ್ಯ ವರ್ತನೆ ತೋರುತ್ತಿದ್ದು. ಇದರ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಕ್ರಮ ವಹಿಸಲು ಸೂಚಿಸಲಾಯಿತು. (ಕ್ರಮ:– ಜಯನಗರ ಪೋಲಿಸ್ ಠಾಣೆ ಮತ್ತು ಜಯನಗರ ಸಂಚಾರ ಪೋಲಿಸ್ ಠಾಣೆ)

6. ಕೆಲ ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ತಗ್ಗು ಪ್ರದೇಶಗಳಲ್ಲಿ ನೀರು ತುಂಬಿಕೊಳ್ಳತ್ತಿದ್ದು ಹಾಗೂ ಚರಂಡಿಗಳಲ್ಲಿ ಮಳೆನೀರು ಸರಾಗವಾಗಿ ಹರಿಯದೆ ರಸ್ತೆಗಳಲ್ಲಿ ಮಳೆನೀರು ನಿಂತುಕೊಂಡು ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುತ್ತದೆ. ಅದ್ದರಿಂದ ರಸ್ತೆಬದಿಯ ಚರಂಡಿಗಳನ್ನು (Road side drain & drain Shoulder) ಸ್ವಚ್ಚಗೊಳಿಸಲು ಸೂಚಿಸಲಾಯಿತು. (ಕ್ರಮ:– ಸ.ಕಾ.ನಿ.ಅ, ಜಯನಗರ ಉಪ–ವಿಭಾಗ, ಬಿ.ಬಿ.ಎಂ.ಪಿ)

ಕೊನೆಯಲ್ಲಿ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸಾರ್ವಜನಿಕರಿಗೆ ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಎಲ್ಲಾ ಇಲಾಖೆ ಅಧಿಕಾರಿಗಳಿಗೆ ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಡಾ: ಜಗದೀಶ್ ಕೆ ನಾಯಕ್) 5/08/2022
ವಲಯ ಜಂಟಿ ಆಯುಕ್ತರು (ದಕ್ಷಿಣ)
ಹಾಗೂ ಅಧ್ಯಕ್ಷರು ವಾರ್ಡ–168 ರ ಸಮಿತಿ ಸಭೆ
ಮತ್ತು ನೋಡಲ್ ಅಧಿಕಾರಿಗಳು

ಪ್ರತಿಯನ್ನು:–

1. ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
2. ವಲಯ ಆಯುಕ್ತರು(ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
3. ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಕಛೇರಿ ಕಡತಕ್ಕೆ.